ಚನ್ನಪ್ಪ ಕಟ್ಟಿ

# ಸಾಹಿತ್ಯಯಾನದ ಒಬ್ಬಂಟಿ ಪಯಣಿಗ

## ಎಸ್.ಎಫ್. ಯೋಗಪ್ಪನವರ್

ಕನ್ನಡ ಸಾಹಿತ್ಯವನ್ನು ತಮ್ಮ ವಿಶಿಷ್ಟ ಬರಹಗಳಿಂದ ಸಮೃದ್ಧಗೊಳಿಸಿದ ಲೇಖಕ ಎಸ್.ಎಫ್. ಯೋಗಪ್ಪನವರ್ (18 ನವೆಂಬರ್ 1949 – 04 ಮೇ 2021) ಇತ್ತೀಚೆಗೆ ನಿಧನರಾದರು. ಅವರ ವ್ಯಕ್ತಿತ್ವ ಮತ್ತು ಬರವಣಿಗೆಯ ಅವಲೋಕನ ಇಲ್ಲಿದೆ.

ನಮ್ಮ ನಡುವಿನ ವಿಶಿಷ್ಟ ಕಾದಂಬರಿಕಾರ, ಕತೆಗಾರ ಮತ್ತು ಅನುವಾದಕ ಎಸ್.ಎಫ್. ಯೋಗಪ್ಪನವರ್ ಅವರು ಮೇ ಮೊದಲ ವಾರದಲ್ಲಿ ಕೋವಿಡ್–19ಗೆ ಬಲಿಯಾದರು. ಅವರ ಸಾವನ್ನು ನೆನಪಿಸಿಕೊಂಡಾಗಲೆಲ್ಲ ಅವರು ಕ್ಲಾಸ್ ರೂಮಿನಲ್ಲಿ ಹೇಳುತ್ತಿದ್ದ ಟಿ.ಎಸ್. ಎಲಿಯಟ್‌ನ 'ಮರ್ಡರ್ ಇನ್ ದಿ ಕ್ಯಾಥೆಡ್ರಿಲ್' ನಾಟಕದ '**Death has a hundred hands and walks by a thousand ways**' ಎನ್ನುವ ಸಾಲು ನೆನಪಿಗೆ ಬರುತ್ತದೆ. ಸಾವು ನಮ್ಮ ಎದುರಿಗೆ ನಿಂತು ನಾನು ಬಂದೇ ಬಿಟ್ಟಿದ್ದೇನೆ ನೋಡಿ. ನನ್ನಿಂದ ಹೇಗೆ ಪಾರಾಗುತ್ತೀರೋ ಪಾರಾಗಿರಿ ಎನ್ನುವಂತೆ ಬರುತ್ತದೆಯಂತೆ. ಅಥವಾ ಯಾವುದೇ ಚಿಕ್ಕ ಸುಳುಹು ಕೊಡದೆ ಬಂದು ತನ್ನ ಕೆಲಸವನ್ನು ಪೂರೈಸಿಕೊಂಡು ಹೋಗಿಬಿಡುತ್ತದೆಯಂತೆ. ಯೋಗಪ್ಪನವರ್ ವಿಷಯದಲ್ಲಿ ಸಾವು ಕೋವಿಡ್ ಹೆಸರಿನಲ್ಲಿ ಹುಬೆ ಹುಬೆ ಎಂದು ಬಂದು ಅವರನ್ನು ಕಸಿದುಕೊಂಡು ಹೋಯಿತು.

ಎಲಿಯಟ್‌ನ ನಾಟಕದ ಮಾತುಗಳನ್ನು ಅವರಿಂದ ನಾನು ಕೇಳಿಸಿಕೊಂಡದ್ದು 1972–1974ರ ಅವಧಿಯಲ್ಲಿ. ನಾನು ಆಗ ಬಾದಾಮಿಯ ಶ್ರೀ ವೀರಪುಲಿಕೇಶಿ ಪದವಿಪೂರ್ವ ಕಾಲೇಜಿನಲ್ಲಿ ಅವರ ವಿದ್ಯಾರ್ಥಿ. ಅವರು 1972ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಗುಲಬರ್ಗಾ ಪಿ.ಜಿ. ಸೆಂಟರ್‌ನಿಂದ ಇಂಗ್ಲಿಷ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಬಂದಿದ್ದರು. ಹೊಸದನ್ನು ಹೇಳುವ ಉತ್ಸಾಹ ಅವರಲ್ಲಿ ಉಕ್ಕಿ ಹರಿದಾಡುತ್ತಿತ್ತು. ಓದುವ ವಿಷಯದಲ್ಲಿ ಅವರು ಬಕಾಸುರನಂತೆ ಇದ್ದರು. ನಾನು ಎರಡು ವರ್ಷ ಅವರು ವಾಸಿಸುತ್ತಿದ್ದ ಬಾಡಿಗೆ ಮನೆಯಲ್ಲಿಯೇ ಇದ್ದೆ. ನೆಲದ